# ನೀವು ಕೇಳಿದಿರಿ?

ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ

◆ ದೇಗುಲದಲ್ಲಿ ದೀಪಕ್ಕೆ ಹಾಕುವ ಎಣ್ಣೆಗೂ, ಬಾರ್‌ನಲ್ಲಿ ಹೊಟ್ಟೆಗೆ ಹಾಕುವ ಎಣ್ಣೆಗೂ ಏನು ವ್ಯತ್ಯಾಸ?



ಆ ಎಣ್ಣೆಯಿಂದ ಕತ್ತಲೆ ನಾಶ; ಈ ಎಣ್ಣೆಯಿಂದ ತಲೆಯೇ ನಾಶ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

◆ ಪುಣ್ಯಸ್ತ್ರೀನ ಸತಿ ಸಾವಿತ್ರಿ ಅಂತಾರೆ. ಪುಣ್ಯ ಪುರುಷನ್ನ ಏನೆನ್ನುತ್ತಾರೆ?

ಅವಿವಾಹಿತ!

ಹಾಡ್ಯ ಬ. ಜಯಾನಂದ, ಮೈಸೂರು

◆ 'ಬುಟ್ಟಿಗೆ ಹಾಕ್ಕೊಂಡವ್ಳೆ' ಅಂತಾರಲ್ಲ, ಬುಟ್ಟೀನೇ ಯಾಕೆ?

ಉಸಿರಾಡಕ್ಕೆ ಗಾಳಿ, ಅಲ್ಲಾಡದಹಾಗೆ ಗಾಳ ಹಾಕಕ್ಕೆ ಡಬ್ಬಿ, ಬ್ಯಾಗು, ಪ್ಯಾಕೆಟ್‌ಗಳಿಗಿಂತ ಬುಟ್ಟೀನೇ ಬೆಸ್ಟು.

ನೇ.ಗೋ.ಭ, ಕುಕ್ಕೆ ಸುಬ್ರಹ್ಮಣ್ಯ

◆ ಪ್ರತಿ ದಿನ ಮನೆಯಲ್ಲಿ ಭಜನೆ ಇಲ್ಲದಿದ್ದರೆ ಆ ಮನೆ ವಿಭಜನೆ ಆಗುತ್ತದಂತೆ ನಿಜವೇ ರಾಂಜೀ?

ಹೇಳಿಕೆಯಲ್ಲಿ ಸ್ವಲ್ಪ ಬದಲಾವಣೆ ಇದೆ; ಅದು ಕೇವಲ 'ಮನೆ' ಅಲ್ಲ. 'ಇಸ್ಪೀಟ್ ಮನೆ' ಉರುಫ್ ಕ್ಲಬ್ಬು.

ಬಿ. ಚಂದ್ರೇಗೌಡ, ಬೆಂಗಳೂರು

◆ ಗುರುವಿನ ಗುಲಾಮನಾಗುವುದಕ್ಕೂ, ಹೆಂಡತಿಯ ಗುಲಾಮನಾಗುವುದಕ್ಕೂ ಏನು ವ್ಯತ್ಯಾಸ?

ಗುರುವಿನ ಗುಲಾಮನಾಗುವುದು ಆಪ್ಷನಲ್.

ಆರತಿ ಘಟಿಕಾರ್, ಬೆಂಗಳೂರು

◆ ಅಮ್ಮನ ಪ್ರೀತಿಗೂ, ಅತ್ತೆಯ ಪ್ರೀತಿಗೂ ವ್ಯತ್ಯಾಸವೇನು?

ಅಮ್ಮನ ಪ್ರೀತಿ ಸಹಜ ಮಳೆ. ಅತ್ತೆಯದು ಶೂಟಿಂಗ್ ಟೈಮಲ್ಲಿ ಸುರಿಸುವ ಮಳೆ.

ವಿ.ಎಸ್. ಹಿಂದೂಪುರ, ಬಳ್ಳಾರಿ

◆ ಇಂದಿನ ಬಹಳಷ್ಟು ಮದುವೆಗಳು ತಾಳಿಬರುತ್ತಿಲ್ಲ. ಏಕೆ?

'ಮಧು' ಕಡಿಮೆ, 'ವ್ಯಾ...' ಜಾಸ್ತಿ ಇರುವುದರಿಂದ.

ವ. ಉಮೇಶ ಕಾರಂತ, ಮಂಗಳೂರು

◆ ಕುಟುಕು ಜೀವಿಗಳಿಗೆ ಉದಾಹರಣೆ ಕೊಡಿ ಗುರು...?

ಕುಟುಕುಜೀವಿಗಳ ಲಿಸ್ಟೇ ಇದೆಯಲ್ಲ.... ಬೆಂಗಳೂರು, ಮೈಸೂರು, ಧಾರಾವಾಡ, ಕಲಬುರ್ಗಿ ಎಂಬ ಭಿನ್ನವೇನಿಲ್ಲ.

ಎಸ್. ವಿಜಯಕುಮಾರಿ, ಬೆಂಗಳೂರು

◆ ಗಾಂಧೀಜಿಗೂ, ಮೋದಿಗೂ ಇರುವ ವ್ಯತ್ಯಾಸವೇನು?

ಅವರದು ದಂಡಿ ಯಾತ್ರೆ; ಇವರದು ಯಾತ್ರೆಗಳು ದಂಡಿ.

ಜೆ.ಸಿ. ರವಿಕುಮಾರ್, ಜಯಸುವರ್ಣಪುರ

◆ ಬ್ಯಾಂಕಿಗೆ ಬರುವ ಬಹುಪಾಲು ಗ್ರಾಹಕರು ಪೆನ್ ತರುವುದಿಲ್ಲ. ಏಕೆ?

ದೇಗುಲಕ್ಕೆ ಬರಿಗಾಲಲ್ಲಿ, ಬ್ಯಾಂಕಿಗೆ ಬರಿಗೈಯಲ್ಲಿ ಬಂದು ಹೋಗುವಾಗ ಚಪ್ಪಲಿ, ಪೆನ್ ಹೊಂದುವುದು ಜಾಣ್ಮೆಯಂತೆ.

ಕೆ.ಎಂ. ವಿಭೂತಿ, ಹರಿಹರ

◆ ಈ ತಂತ್ರಜ್ಞಾನದ ಕಾಲದಲ್ಲಿ ಸ್ತ್ರೀಯರ ಮಾನ ಕಾಪಾಡಲು ಸೀರೆ ಸೂಕ್ತವೋ, ಚೂಡಿದಾರ ಸೂಕ್ತವೋ?

ಕರಾಟೆ, ಪೆಪ್ಪರ್ ಸ್ಪ್ರೇ, ಧೈರ್ಯಗಳಿದ್ದರೆ ಡ್ರೆಸ್ ಯಾವುದಿದ್ದರೂ ಆದೀತು.

ಸುನಂದ ಲೋಕೇಶರೆಡ್ಡಿ, ದಾವಣಗೆರೆ

◆ ಸಿನಿಮಾಗಳಲ್ಲಿ ಹೀರೋ ಒಬ್ಬನನ್ನು ಹೊಡೆಯಲು ಖಳನಾಯಕನ ಚೇಲಾಗಳು ಹತ್ತಿಪ್ಪತ್ತು ಇರ್ತಾರಲ್ಲಾ...?



ಸಿನಿಮಾ ಹೀರೋ ಅರ್ಥವೇ ಅದು; **Row** (ಸಾಲಾಗಿ ನಿಂತಿರುವ) ಜನಗಳನ್ನು ಹೊಡೆಯುವ **he** (ಅವನೇ) **hero!**

## ಬಹುಮಾನಿತ ಪ್ರಶ್ನೆ

ಸುಂದರ್, ಬೆಂಗಳೂರು

◆ 'ಮಳ್ಳಿ ಮಳ್ಳಿ ಮಂಚಕ್ಕೆಷ್ಟು ಕಾಲು' ಎಂದರೆ ಪುಢಾರಿಗಳ ಉತ್ತರವೇನು?

'ಗೊತ್ತಿಲ್ಲ. ನಮ್ಮದೇನಿದ್ದರೂ ಕುರ್ಚಿ ವ್ಯವಹಾರ. ಮಂಚದ್ದಕ್ಕೆ ರಸಿಕ ಮಠಾಧೀಶರನ್ನು ಕೇಳಿ' ಎಂದು.

ಮಲ್ಲಿಕಾರ್ಜುನ ಹ. ಬಗಲಿ, ಜತ್ತ

◆ ಸಂಕಟದಲ್ಲಿ ನಗು, ಸಂಭ್ರಮದಲ್ಲಿ ಕಣ್ಣೀರು ಯಾವಾಗ ಬರುತ್ತದೆ?

ಹೆರಿಗೆ ಮತ್ತು ಹೆಣ್ಣೊಪ್ಪಿಸುವ ಸಮಯಗಳಲ್ಲಿ.

ಶ್ರೀನಿವಾಸ ಜಿ. ಪದಕಿ, ಮುಂಬಯಿ

◆ ಗಂಡ ಹೆಂಡಿರ ಜಗಳ ಉಂಡು ಮಲಗುವ ತನಕ. ಅತ್ತೆ ಸೊಸೆಯರ ಜಗಳ?

ಗಂಡು ಸೊರಗುವ ತನಕ.

ಯಶೋದಾ ಶಿವಣ್ಣ ಶೆಟ್ಟಿ, ಅಜೆಕಾರ್

◆ ಸ್ವಚ್ಛವಾದ ನೀರಿನಲ್ಲಿ ಈಜಾಡುವ ಮೀನುಗಳು ವಾಸನೆಯಿಂದ ಇರಲು ಕಾರಣವೇನು?



ಈಜುತ್ತಲೇ ಇರುತ್ತವಲ್ಲ, ಈಜಿದಾಗ ಸುರಿಯುವ ಬೆವರಿನ ವಾಸನೆಯದು.

ಭಾರತಿ ಮಾನಗೆ, ಹೊನ್ನಾವರ

◆ ಸ್ಯಾಂಡಲ್‌ವುಡ್‌ಗೂ, ಬಾಲಿವುಡ್‌ಗೂ ಏನು ವ್ಯತ್ಯಾಸ?

ಹೇಳುವಂತಹದ್ದೇನೂ ಇಲ್ಲ, ಎಂತಹವರೂ ಹೀರೋ ಆಗಬಹುದು.

ಆರ್. ಮಧುಸೂದನ್, ಹಾಸನ

◆ ನನ್ನದು ಸಿಂಹ ರಾಶಿ. ಆದರೂ ನಾನು ಭಯಂಕರ ಪುಕ್ಕಲ. ಯಾಕೆ?

ಆನೆಯಂತಹವಳನ್ನು ಕಟ್ಟಿಕೊಂಡಿದ್ದೀರಂತೆ.... ಆನೆಯ ಮುಂದೆ ಸಿಂಹ ಪುಕ್ಕಲೇ.

■ ರಾಮ್